## ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ

**ಸಿ.ಸಿ. ನಂ. 313/2020**

| | | | |
|---|---|---|---|
| **ಹೆಸರು** | **:** | **ನಾಗಮಣಿ** | **ದೋ.ಸಾ. 9** |
| **ಗಂಡನ ಹೆಸರು** | **:** | **ಬಾಬುರಾವ** | **ಪ್ರಾ.ಸಾ. 5** |
| **ವಯಸ್ಸು** | **:** | **60 ವರ್ಷ** | **ದಿನಾಂಕಃ 10-07-2023** |
| **ಉದ್ಯೋಗ** | **:** | **ಗೃಹಿಣಿ** | |
| **ವಾಸಸ್ಥಳ** | **:** | **ನರನಾಳ** | |

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-1 ಮತ್ತು 8 ನನ್ನ ಮಕ್ಕಳು. ಚಾಸಾ-6, 7 ಮತ್ತು 11 ರವರು ನಮ್ಮ ಊರಿನವರು.

ಮೃತ ಬಾಬುರಾವ ನನ್ನ ಗಂಡ.

ಈಗ್ಗೆ 4 ವರ್ಷದ ಹಿಂದೆ ಚಿಮ್ಮನಚೋಡು ಬಳಿ ನಡೆದ ರಸ್ತೆ ಅಪಘಾತದಲ್ಲಿ ನನ್ನ ಗಂಡ ತೀರಿಕೊಂಡಿರುತ್ತಾರೆ. ಸದರಿ ಅಪಘಾತ ನಡೆದಾಗ ನಾನು ಮನೆಯಲ್ಲಿದ್ದೆ. ಅಪಘಾತ ನಡೆದ ವಿಚಾರವನ್ನು ಚಾಸಾ-1 ನನ್ನ ಮಗನಿಗೆ ಬೇರೆ ಯಾರೋ ಫೋನ್ ಮಾಡಿ ಹೇಳಿದ್ದನ್ನು ಆತ ನನಗೆ ತಿಳಿಸಿರುತ್ತಾನೆ. ಅಪಘಾತವನ್ನು ನಾನು ಕಣ್ಣಾರೆ ಕಂಡಿಲ್ಲ. ಅಪಘಾತ ನಡೆದ ಸುದ್ದಿ ಕೇಳಿ ನಾನು ಚಿಂಚೋಳಿ ಆಸ್ಪತ್ರೆಗೆ ಬಂದೆ. ನನ್ನ ಗಂಡನನ್ನು ನೋಡಲಾಗಿ ಅವರು ಉಸಿರಾಡುತ್ತಿದ್ದರು ಆದರೆ ಮಾತಾನಾಡುವ ಸ್ಥಿತಿಯಲ್ಲಿರಲಿಲ್ಲ ನಂತರ ನನ್ನ ಗಂಡನನ್ನು ಗುಲ್ಬರ್ಗಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಗುಲ್ಬರ್ಗಾದಲ್ಲೆ ನನ್ನ ಗಂಡ ತೀರಿಕೊಂಡಿರುತ್ತಾರೆ.

ಆಟೋ ಪಲ್ಟಿಯಾಗಿ ಅಪಘಾತ ಆಯಿತು ಎಂದು ನನಗೆ ಗೊತ್ತಾಯಿತು. ಯಾರ ತಪ್ಪಿನಿಂದ ಅಪಘಾತ ಆಗಿದೆ ಎಂದು ನನಗೆ ಗೊತ್ತಿಲ್ಲ.

ಪೋಲೀಸರು ಈ ಪ್ರಕರಣದ ಸಂಬಂಧ ನನ್ನನ್ನು ವಿಚಾರಣೆ ಮಾಡಿಲ್ಲ. ಪೋಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಕೊಟ್ಟಿರುವ ಹೇಳಿಕೆಗೆ ಈ ಸಾಕ್ಷಿ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಸಂಪೂರ್ಣ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಅಪಘಾತ ನಡೆದ ಸುದ್ದಿ ಕೇಳಿದ ನಂತರ ನಾನು, ಚಾಸಾ-1 ಮತ್ತು 8 ರವರು ಅಪಘಾತ ನಡೆದ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ರಸ್ತೆಯ ಎಡಭಾಗದ ಮುಳ್ಳು ಕಂಟಿಗೆ ಕೆಎ-32 ಸಿ-1127 ರ ಆಟೋ ಪಲ್ಟಿಯಾಗಿ ಬಿದ್ದಿತ್ತು ಎಂದರೆ ಸರಿ. ಸದರಿ ಆಟೋದಲ್ಲಿ ನನ್ನ ಗಂಡ ಮತ್ತು ಚಾಸಾ-10, 12 ಹಾಗೂ 13 ರವರು ಪ್ರಯಾಣಿಸುತ್ತಿದ್ದಾಗ ಸದರಿ ಆಟೋದ ಚಾಲಕನಾಗಿದ್ದ ಆರೋಪಿಯು ಆಟೋವನ್ನು ಜೋರಾಗಿ ಚಲಾಯಿಸಿದ್ದರಿಂದ ಮತ್ತು ಆತನ ತಪ್ಪಿನಿಂದ ಅಪಘಾತವಾಗಿ ಆಟೋ ಪಲ್ಟಿಯಾಯಿತು ಎಂದು ಚಾಸಾ-11 ರವರು ನನಗೆ ಹೇಳಿದರು ಎಂದರೆ ಸರಿ.

ಮೇಲ್ಕಂಡ ವಿಚಾರವನ್ನು ದಿನಾಂಕ 14-05-2019 ರಂದು ಪೊಲೀಸರ ಮುಂದೆ ನಾನು ಕೊಟ್ಟ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಪಿ.ಆರ್. ವಕೀಲರಿಂದಃ</u>**

ನಾನು ವಿದ್ಯಾಭ್ಯಾಸ ಮಾಡದೆ ಇರುವುದರಿಂದ ದಿನಾಂಕ, ತಿಂಗಳು ಮತ್ತು ವರ್ಷಗಳ ಬಗ್ಗೆ ನನಗೆ ಅಷ್ಟಾಗಿ ಜ್ಞಾನ ಇಲ್ಲ ಎಂದರೆ ಸರಿ. ನನ್ನ ಗಂಡನ ಸಾವಿಗೆ ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು ಕೇಸು ದಾಖಲಿಸಿ ಈಗ ಆತನ ತಪ್ಪಿನಿಂದಲೆ ಅಪಘಾತವಾಯಿತು ಎಂದು ನನಗೆ ಗೊತ್ತಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಚಾಸಾ-11 ರವರು ನನಗೆ ಅಪಘಾತ ಹೇಗಾಯಿತು ಎಂಬ ಬಗ್ಗೆ ಏನನ್ನು ಹೇಳಿಲ್ಲ ಎನ್ನುವುದು ಸರಿಯಲ್ಲ.

ಅಪಘಾತ ನಡೆಯಿತು ಎನ್ನಲಾದ ಸ್ಥಳದಲ್ಲಿ ಜಮೀನಿಗೆ ನೀರು ಹಾಯಿಸುವ ಉದ್ದೇಶದಿಂದ ರಸ್ತೆಯಲ್ಲಿ ಗುಂಡಿ ತೆಗೆದಿದ್ದರು ಎನ್ನುವುದು ಸರಿ.

ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದಾಗ ನಾನು ಹೇಳಿರುವುದೆಲ್ಲಾ ಸುಳ್ಳು ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**